ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2021

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444

ಸಂಪುಟ-21 ಸಂಚಿಕೆ-9 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ಮಂಟಪದಲ್ಲಿ ಋಗುಪಾಕರ್ಮ

ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ತಾ.21.08.2021ರಂದು ಋಗುಪಾಕರ್ಮವನ್ನು ಆಚರಿಸಲಾಯಿತು. ಕೊರೋನಾ ನಿಮಿತ್ತ ಸರಳವಾಗಿ ಆಚರಿಸಲಾದರೂ ಸಮಾಜ ಬಾಂಧವರ ತುಂಬು ಸಹಕಾರದಿಂದ ಧಾರ್ಮಿಕ ವಿಧಾನಗಳನ್ನು ಚಾಚೂ ತಪ್ಪದೆ ಪರಿಪಾಲಿಸಿಕೊಂಡು ಆಚರಿಸಲಾಯಿತು. ಬೆಳಿಗ್ಗೆ 10 ಗಂಟೆಯಿಂದ ಶ್ರೀ ರವಿ ಉಪಾಧ್ಯಾಯ ಇವರ ನೇತೃತ್ವದಲ್ಲಿ ನಡೆದ ಹೋಮಹವನಾದಿಗಳಲ್ಲಿ ಸಮಾಜ ಬಾಂಧವರು ಭಾಗವಹಿಸಿ ನೂತನ



ಯಜ್ಞೋಪವೀತ ಧಾರಣೆ ಮಾಡಿದರು. ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ನಡೆದ ಈ ಸಮಾರಂಭದಲ್ಲಿ ಸುಮಾರು 50 ಜನ ಸಮಾಜ ಬಾಂಧವರು ಭಾಗವಹಿಸಿ ಭೋಜನವನ್ನು ಸ್ವೀಕರಿಸಿದರು. ಅಧ್ಯಕ್ಷರಾದ ಶ್ರೀ ಕೆ.ಮಂಜುನಾಥ್ ಹೆಬ್ಬಾರ್, ಪ್ರಭಾರ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಕೋಶಾಧಿಕಾರಿ ಶ್ರೀ ಬಿ. ಜಯರಾಮ ರಾವ್ ಹಾಗೂ ಇನ್ನಿತರ ಪದಾಧಿಕಾರಿಗಳು ಭಾಗವಹಿಸಿದ್ದರು. ಸಂಘದ ನಿಕಟಪೂರ್ವ ಕಾರ್ಯದರ್ಶಿ ಶ್ರೀ ಕೆ.ಸುರೇಶ್ ರಾವ್ ಕುತ್ಪಾಡಿ ಇವರು ಕತೃಗಳಾಗಿ ಸಹಕರಿಸಿದರು.



## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು,
ಉಡುಪಿ - 576 102.

### ಆಮಂತ್ರಣ

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ಪ್ಲವ ನಾಮ ಸಂವತ್ಸರದ ಕನ್ಯಾ ಮಾಸ ದಿನ ೨೯ ಸಲುವ
ಆಶ್ವಯುಜ ಶುದ೧೦ ಯು, ತಾ.15-10-2021ನೇ ಶುಕ್ರವಾರ

**ವಿಜಯದಶಮಿ ದಿನದಂದು**

### ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಆ ದಿನ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಶ್ರೀ ಯು. ಅರವಿಂದ ಕುಮಾರ್ | ಶ್ರೀ ಬಿ. ಜಯರಾಮ ರಾವ್ | ಶ್ರೀ ಕೆ.ಮಂಜುನಾಥ ಹೆಬ್ಬಾರ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ವಿ.ಸೂ : ಈ ವರ್ಷವೂ ನವರಾತ್ರಿಯಲ್ಲಿ ತಾ.07.10.2021ರಿಂದ ತಾ.14.10.2021ರ ವರೆಗೆ ಪ್ರತೀ ದಿನ ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ದುರ್ಗಾನಮಸ್ಕಾರ ಸೇವೆಯ ಕರ್ತೃಗಳಾಗಬಯಸುವವರಿಗೆ ರೂ.5000 ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಪ್ರಭಾರ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಪೆರ್ಡೂರು 9449254846ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು, ಮಾಸ್ಕ್‌ಧರಿಸಿ ಸಹಕರಿಸಬೇಕೆಂದು ಕೋರುತ್ತೇವೆ.



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಶ್ರೀ ಶಾರದಾ ದೇವಸ್ಥಾನದಲ್ಲಿ ವರಮಹಾಲಕ್ಷ್ಮೀ ವ್ರತ ಹಾಗೂ ಹೂವಿನ ಪೂಜೆ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿಯ ವತಿಯಿಂದ ಶ್ರಾವಣ ಶುಕ್ರವಾರದ ಪ್ರಯುಕ್ತ ವರ್ಷಂಪ್ರತಿಯಂತೆ ಮಹಿಳಾ ವೇದಿಕೆ ಮತ್ತು ಸಂಘದ ವತಿಯಿಂದ ವರಮಹಾಲಕ್ಷ್ಮೀ ವ್ರತ ಹಾಗೂ ಸಾಮೂಹಿಕ ಹೂವಿನ ಪೂಜೆಯು ತಾ.20.08.2021 ರಂದು ನಡೆಯಿತು. ಕೊರೊನಾ ನಿಯಮಾವಳಿ ಪ್ರಯುಕ್ತ ಸರಳ ರೀತಿಯಲ್ಲಿ ಆಚರಿಸಲಾಯಿತು. ದೇವಿಯನ್ನು ಪಟ್ಟೆಪೀತಾಂಬರ, ಪುಷ್ಪಗಳಿಂದ ಅಲಂಕರಿಸಲಾಗಿತ್ತು. ವಾಡಿಕೆಯಂತೆ ಭಜನೆ, ಲಲಿತಾಸಹಸ್ರನಾಮ, ಶ್ರೀ ಶಂಕರಸಹಸ್ರ ನಾಮಾರ್ಚನೆಗಳನ್ನು ಪಠಿಸಿ ಮಹಾಪೂಜೆ ನೆರವೇರಿಸಲಾಯಿತು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಮಹಿಳಾವೇದಿಕೆಯ ಕಾರ್ಯಕರ್ತರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

### ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

# ನಾಗರಪಂಚಮಿ, ಕೃಷ್ಣಾಷ್ಟಮಿ ಮತ್ತು ವಿಶ್ವರೂಪ ದರ್ಶನ

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.



**ನಾಗರಪಂಚಮಿ :** ನಾಗಾರಾಧನೆ ದ್ರಾವಿಡ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ದಕ್ಷಿಣ ಕನ್ನಡದ ತುಳುನಾಡಿನಲ್ಲಂತೂ ನಾಗಪೂಜೆ ವಿವಿಧ ಪ್ರಕಾರಗಳಲ್ಲಿ ವೈಭವೋಪೇತವಾಗಿ ಪ್ರಚಲಿತ. ಮನೆಗೊಂದೋ ಅಥವಾ ಊರಿಗೆ ಒಂದೋ ಅಥವಾ ಬಹುತೇಕ ಅಶ್ವತ್ಥ ಮರದ ಬುಡದಲ್ಲೋ ನಾಗಬನವಿರುತ್ತದೆ. ಇಲ್ಲಿ ಕಲ್ಲಿನಲ್ಲಿ ನಾಗರಬಿಂಬ ಪ್ರತಿಷ್ಠಾಪಿಸಿ ಪೂಜೆ ನೆರವೇರುತ್ತದೆ. ನಾಗರ ಪಂಚಮಿ ದಿನದಂದು ನಾಗಬನದಲ್ಲಿ ನಾಗರ ಕಲ್ಲಿಗೆ ಹಾಲು, ಸೀಯಾಳ ಅಭಿಷೇಕ ಮಾಡಲಾಗುತ್ತದೆ. ಒಂದು ಕೇದಗೆಯಾದರೂ ನಾಗರಾಜನಿಗೆ ಅರ್ಪಿತವಾಗುತ್ತದೆ. ಸಂತಾನ ಭಾಗ್ಯ, ಕುಷ್ಠರೋಗ ನಿವಾರಣೆ ಮತ್ತು ಇನ್ನಿತರ ಅಭೀಷ್ಟಗಳ ಈಡೇರುವಿಕೆಗಾಗಿ ಹರಕೆ ಸಲ್ಲಿಸಲಾಗುತ್ತದೆ. ಬೇರೆ ಕಷ್ಟ, ನಷ್ಟ ಹಾಗೂ ಅನಿಷ್ಟಗಳ ಪರಿಹಾರಕ್ಕಾಗಿಯೂ ಪ್ರಾರ್ಥನೆ ಮಾಡಲಾಗುತ್ತದೆ. ನಾಗದೋಷದ ಭಯದಿಂದಾಗಿ ಭಾಷೆ, ಜಾತಿ ಮತಭೇದವಿಲ್ಲದೆ ಕಲ್ಲ ನಾಗನಿಗೆ ತನುಸೇವೆ ನಾಗರ ಪಂಚಮಿ ದಿನದಂದು ಸಲ್ಲುತ್ತದೆ.

ಇನ್ನು ಈ ನಾಗೇಶ ಭೂಮಿಯನ್ನೇ ಹೊತ್ತ ಆದಿಶೇಷ. ನಾಗೇಂದ್ರ ಕ್ಷೀರಸಾಗರದಲ್ಲಿ ವಿಷ್ಣುವಿನ ಶಯನಕ್ಕೆ ಆಧಾರನಾದ ಸಹಸ್ರಶೀರ್ಷ ಅನಂತ. ನಾಗಕನ್ನಿಕೆಯರ ಪಾತಾಳ ಲೋಕಕ್ಕೂ ಈ ನಾಗರಾಜನೇ ಧನಿ ಎಂಬ ನಂಬಿಕೆ. ಶಂಕರನಿಗೋ ಈ ಉರಗವೇ ಭೂಷಣ. ಮಹಾಗಣಪತಿಯ ಉದರಕ್ಕೂ ಇದೇ ರಕ್ಷಾ ಬಂಧನ. ಅಭಯ ಪಡೆದು ವಾಸುಕೀಯಂತರ್ಗತನಾಗಿ ಸುಬ್ರಹ್ಮಣ್ಯ ಕ್ಷೇತ್ರದಲ್ಲೂ ಈ ನಾಗನೇ ಪ್ರಸಿದ್ಧಿ.

ಕಲಿಯುಗದಲ್ಲಿ ನಾಗಮಂಡಲದ ಡಮರು–ನಿನಾದದ ಕೇಂದ್ರ ಬಿಂದು. ಈ ನಾಗಪ್ವಯ್ಯ ಕೆರಳಿಸುವ ಪುಂಗಿಯ ಇಂಚರಕ್ಕೂ ಹೆಡೆಯೆತ್ತುವ ನಾಗರ ಹಾವೇ ಆಧಾರ ಬಿಂದು, ಜನರ ಭಕ್ತಿ ಭಾವ–ಭಯಗಳೇ ಹಾವಾಡಿಗರ ವ್ಯವಹಾರಕ್ಕೂ ಬಂಡವಾಳವಾಗಿದೆ.

ಹೆಚ್ಚಿನವರು ನಾಗರ ಹಾವನ್ನು ಕಂಡುಕೂಡಲೇ ಅದನ್ನು ಹಿಡಿದು ದೂರ ಬಿಟ್ಟು ಬರುವುದುಂಟು. ಇನ್ನು ಕೆಲವರು ಕೊಲ್ಲುವುದೂ ಉಂಟು. ಆದರೆ ಇದು ಮಹಾಪಾಪ ಎಂಬ ನಂಬಿಕೆಯೂ ಇದೆ. ಅಲ್ಲದೆ ಈ ಬುಸ್ಸುಪ್ಪ ವರ್ಷಗಟ್ಟಲೆ ದ್ವೇಷ ಸಾಧಿಸುತ್ತಾನಂತೆ. ಹಾವಿನ ದ್ವೇಷ ಹನ್ನೆರಡು ವರ್ಷ ಎಂದು ಹೇಳುತ್ತಾರಷ್ಟೇ. ಇದೆಲ್ಲಾ ಪ್ರಾಣಿಹಿಂಸೆ ಮಾಡಬಾರದೆಂಬ ಭಾವನೆಗೆ ಪೂರಕವೇನೋ.

ಕೆಲವು ಪ್ರದೇಶಗಳಲ್ಲಿ ಹಾವೂ ಮನುಷ್ಯರಿಗೆ ಆಹಾರವಂತೆ. ಆದ್ದರಿಂದಲೇ ಹೇಳಿರಬೇಕು. ಹಾವು ತಿಂದವರ ನುಡಿಸಲು ಬಹುದು. ಆದರೆ ಹಣದ ಗರ ಬಡಿದವರ ನುಡಿಸಲು ಬಾರದು ಅಂತ.

ಅಂತೂ ವಿಷಜಂತುವಾದ ಸರ್ಪ ತನಗೂ ತನ್ನ ಕುಟುಂಬಕ್ಕೂ ಹಾನಿಮಾಡದಿರಲೆಂದು ಮನುಷ್ಯ ಹಾಲೆರೆದು ಸರ್ಪಾರಾಧನೆ ಮಾಡಿದ, ಆದರೆ ಅದು ಹಾಲು ಕುಡಿಯುವುದಿಲ್ಲ ಎಂದು ಕೆಲವರ ಅಭಿಪ್ರಾಯ. ಆದ್ದರಿಂದಲೇ ಇದನ್ನು ಹೇಳಿರಬೇಕು–ಕಲ್ಲ ನಾಗನ ಕಂಡರೆ ಕೈಮುಗಿಯೆಂಬರು..?.

ಇನ್ನು ನಿಧಿಯಿದ್ದಲ್ಲಿ ಸರ್ಪಕಾವಲು ಇರುತ್ತದೆ ಎಂದೂ ಜನರು ತಿಳಿಯುತ್ತಾರೆ. ಆದ್ದರಿಂದಲೇ ಸರ್ಪವಿದ್ದಲ್ಲಿ ನಿಧಿಯಿದೆಯೆಂದು ಅಥವಾ ನಿಧಿಯಿದ್ದಲ್ಲಿ ಸರ್ಪವಿದೆಯೆಂದು ನಂಬಿಕೆ ಹುಟ್ಟಿಕೊಂಡಿದೆ. ಆದರೆ ಹುತ್ತವ ಬಡಿದರೆ? ಎಂದು ಯಾರಾದರೂ ಪ್ರಶ್ನಿಸಿದರೆ ಯಾವ ಹುತ್ತದಲ್ಲಿ ಯಾವ ಹಾವನ್ನು ಕಾಣಬಹುದೋ ಎಂದು ಅನುಮಾನವನ್ನಷ್ಟೇ ವ್ಯಕ್ತಪಡಿಸಬಹುದು. ಆದರೂ ನಂಬಿಕೆ ಉಳ್ಳವರು ಮತ್ತು ನಂಬಿಕೆ ಇಲ್ಲದವರು ಇದಕ್ಕೂ ತಮ್ಮದೇ ಆದ ಶೈಲಿಯಲ್ಲಿ ಉತ್ತರ ಕೊಡಬಲ್ಲರು.

**ಕೃಷ್ಣಾಷ್ಟಮಿ :** ಮುಗಿದ ಅವತಾರಗಳಲ್ಲಿ ನಮಗೆ ಸಮೀಪದ್ದೆಂದರೆ ಶ್ರೀಕೃಷ್ಣವತಾರ. ಈ



ಅವತಾರಕ್ಕೆ ಮಾರು ಹೋಗದವರನ್ನು ಮನುಷ್ಯ ಎಂದೊಪ್ಪುವುದೇ ಕಷ್ಟ. ವಸುದೇವ, ದೇವಕಿ, ಯಶೋದೆ, ನಂದ, ಕಂಸ, ಮಾಲತಿ, ಮಾಧವಿ, ವಾಸಂತಿ, ಭದ್ರ, ವಜ್ರಬಾಹು, ಇಲ್ಲಿ ಪಾತ್ರಧಾರಿಗಳು. ಎಲ್ಲರೂ ಕುಣಿಯುವುದು ಸೂತ್ರಧಾರ ಕೃಷ್ಣನ ಸುತ್ತಲೇ. ಶ್ರೀಕೃಷ್ಣನನ್ನು ಪಡೆದು ಲೋಕಕ್ಕಾಗಿ ಸಮರ್ಪಿಸಿದ ದೇವಕಿಯ ತ್ಯಾಗ ದೊಡ್ಡದು. ಆದ್ದರಿಂದಲೇ ದೇವಕೀ ಪರಮಾನಂದಮ್ ಕೃಷ್ಣಂ, ಮಂಗಲಂ ದೇವಕೀಪುತ್ರೋ ಕೃಷ್ಣಂ ಎಂದೆಲ್ಲ ಸ್ತುತಿಸುತ್ತೇವೆ. “ಯಶೋ ದದಾತಿ ಇತಿ ಯಶೋದಾ” – ಲೋಕಕ್ಕೆ ಯಶಸ್ಸನ್ನು ದಾನ ಮಾಡಿದವಳು ಎಂದರ್ಥ. ಶ್ರೀಕೃಷ್ಣನನ್ನೇ ಲೋಕಕ್ಕೆ ದಾನವಾಗಿತ್ತ ಯಶೋದೆಯ ಭಾಗ್ಯ ದೊಡ್ಡದು. ಸಕಲ ಬಾಲ ಲೀಲೆಗಳನ್ನು ನೋಡಿ ಮುದ್ದಾಡಿ, ಬೆಣ್ಣೆ ತಿನ್ನಿಸಿ, ಕೊನೆಗೆ ಕಂಸವಧೆಯ ನೆಪದಲ್ಲಿ ಲೋಕಕ್ಕೆ ಬಿಟ್ಟುಕೊಟ್ಟ ಯಶೋದೆಯ ತ್ಯಾಗವೂ ದೊಡ್ಡದು. ಆದ್ದರಿಂದಲೇ ಅಲ್ಲವೇ, ಸಕಲ ಬಾಲಲೀಲೆಗಳಲ್ಲಿ ಮಹತ್ವದ್ದು – ಯಶೋದೆಯು ಬಾಲಕೃಷ್ಣನ ಬಾಯಲ್ಲಿ ಕಂಡದ್ದು ಮಣ್ಣಲ್ಲ, ಭೂಮಂಡಲವಲ್ಲ–.


*ಪ್ರಭುವೊಮ್ಮೆ ತಾಯಿ ಮಡಿಲೊಳು*
*ಮಲಗಿ ನೀ ಹಾಲು ಕುಡಿಯುತ್ತಿರಲು*
*ಬಾಯನು ತೆರೆದು ತೋರಿದೆಯವಳಿಗೆ*
*ಸಕಲ ಜಗತ್ತನೂ ನಿನಬಾಯೊಳಗೆ*

*ಮತ್ತೊಮ್ಮೆ ಆಡುತ್ತಿರೆ ಅನ್ಯ*
*ಬಾಲರ ಜೊತೆಗಾ ಬಾಲರಕೈಯ*
*ಹಣ್ಣನು ಕದ್ದುದಕೆ ಕೋಪದಲಿ*
*ಅವರೆಲ್ಲರೂ ನಿನ್ನ ತಾಯಿಯ ಬಳಿಯಲಿ*
*ದೂರಿಟ್ಟರು ನೀ ಬಾಯಲಿ ಹಾಕಿ*
*ಮಣ್ಣನು ತಿಂದೆಯೆಂಬುದಾಗಿ*

*ನಿನ ಬಾಯಲ್ಲಿ ಎಲ್ಲಿದೆ ಮಣ್ಣು*
*ಎಂಬುದನಿಣುಕಿನೋಡಿದ ತಾಯಿಗೆ*
*ಕೊಡಲೆನುವಂತೆ ಪರಮ ತೃಪ್ತಿಯನು*
*ಪ್ರಭು ನೀ ತೋರಿಸಿದೆ ಬಾಯೊಳಗೆ*
*ಮಣ್ಣಲ್ಲ ಭೂಮಂಡಲವಲ್ಲ*
*ಅಂಡಚರಾಚರಗಳನೂ ಸಕಲ*

*ಅಡವಿ ಸಮುದ್ರ ಆಕಾಶಗಳನೂ*
*ಅತಳ ರಸಾತಳ ಪಾತಾಳಗಳನೂ*
*ದೇವ ಮನುಷ್ಯ ದಾನವರನ್ನೂ*
*ವಿಶ್ವದ ಅಖಿಲ ಸೃಷ್ಟಿಗಳನ್ನೂ*
*ಅಚ್ಚರಿಯಲ್ಲಿ ಮುಳುಗಿ ನೋಡಿದಳು*
*ಹೇ ಪ್ರಭುವೇ! ಯಶೋದೆಯು ನಿನ ಬಾಯೊಳು*

*ಅನಂತರ ಮತ್ತೂ ಆಶ್ಚರ್ಯದೊಳು*
*ಪ್ರಭು ನಿನ್ನನ್ನು ನೋಡಿದಳವಳು*
*ಹಾಲ್ಗಡಲಲ್ಲಿ ಪವಡಿಸಿಕೊಂಡಿಹ*





*ಪುರುಷೋತ್ತಮನಾಗಿ ಮೊದಲಲ್ಲಿ*
*ನಂತರ ವೈಕುಂಠದಿ ನೆಲೆಯಾಗಿಹ*
*ಆ ಮಹಾವಿಷ್ಣುವಿನ ರೂಪದಲಿ*
*ಕೊನೆಯಲಿ ತನ್ನ ಎದುರು ನಿಂತಿಹ*
*ಕುವರನ ಮುಗ್ಧ ಆಕಾರದಲಿ.*

ಕೃಪೆ : ಸರಳಗನ್ನಡ ನಾರಾಯಣೀಯ
ಸಂಪಾದಕರು: ಮೇಪತ್ತೂರು ನಾರಾಯಣ ಭಟ್ಟಾದಿರಿ.
ಕನ್ನಡ ಅನುವಾದಕರು : ದಿ. ಕೆ. ರಾಮರಾವ್ ಗುಂಡಿಹಿತ್ಲು.

**ವಿಶ್ವರೂಪ ದರ್ಶನ :** ವಿದ್ಯಾವಾಚಸ್ಪತಿ ಶ್ರೀಬನ್ನಂಜೆ ಗೋವಿಂದಾಚಾರ್ಯರ ಗೀತೋಪದೇಶ ‘ಭಗವಂತನ ನಲ್ನುಡಿ’ ಯ ಮುನ್ನುಡಿಯಲ್ಲಿ ಕೆಲವು ಸಾಲುಗಳು ಇವು :

ಮನಃಶಾಸ್ತ್ರೀಯವಾಗಿ ಈ ಗ್ರಂಥ ಐದು ಸಾವಿರ ವರ್ಷಗಳ ಹಿಂದಿನ ಕೌರವ – ಪಾಂಡವರ ಕಾಳಗದ ಇತಿಹಾಸವಲ್ಲ.



ನಮ್ಮ–ನಿಮ್ಮ ಅಂತರಂಗದ ಇತಿಹಾಸ.

ಜೀವನವೇ ಒಂದು ಹೋರಾಟ. ನಮ್ಮ ಹೃದಯರಂಗವೇ ಕುರುಕ್ಷೇತ್ರ. ಅದರೊಳಗೆ ನಮ್ಮನ್ನು ದಾರಿ ತಪ್ಪಿಸುವ ಕೌರವರೂ ಇದ್ದಾರೆ. ಎಚ್ಚರಿಸುವ ಪಾಂಡವರೂ ಇದ್ದಾರೆ. 11 ಅಕ್ಷೋಹಿಣೀ ಸೇನೆಯೂ ಇದೆ. ಆದರೆ ನಮ್ಮ ಹೋರಾಟದಲ್ಲಿ ಪಾಂಡವರು ಸೋತು ಕೌರವರು ಗೆದ್ದು ಬಿಡುವ ಸಂಭವವುಂಟು. ಹಾಗಾಗ ಬಾರದು. ನಮ್ಮಲ್ಲೂ ಪಾಂಡವರೇ ಗೆಲ್ಲಬೇಕು. ಧರ್ಮ ಜ್ಞಾನಾದಿಗಳೇ ಗೆಲ್ಲಬೇಕು. ಅದಕೆಂದು ನಮ್ಮ ರಥದ ಸಾರಥ್ಯವನ್ನು ಕೃಷ್ಣನ ಕೈಗೊಪ್ಪಿಸಬೇಕು. ಇದು ಗೀತೆಯ ಸಂದೇಶ. ನರರ ಮೂಲಕ ನರರಿಗೆಲ್ಲ ನಾರಾಯಣನ್ನಿತ್ತ ಸಂದೇಶ :

**ಶ್ರೀಮದ್ಭಗವದ್ಗೀತಾ, 11 ನೇಯ ಅಧ್ಯಾಯ ವಿಶ್ವರೂಪದ ಕೆಲವು ಶ್ಲೋಕಗಳು :**

*ಭಗವಾನುವಾಚ :*
*ಮಾಂ ಶಕ್ಯಸೇ ದ್ರಷ್ಟುಮನೇನ್ಯೈವ ಸ್ವ ಚಕ್ಷುಷಾ ।*
*ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್ ॥*

ಭಗವಂತನು ಹೇಳಿದನು : ಅರ್ಜುನಾ, ನಿನ್ನ ಈ ಹೊರಗಣ್ಣಿನಿಂದಲೇ ನೋಡಲಾರೆ ನನ್ನನ್ನು. ಆದ್ದರಿಂದ ದಿವ್ಯವಾದ ಒಳಗಣ್ಣನ್ನು ಕೊಡುತ್ತೇನೆ. ನನ್ನ ಅದ್ಭುತವಾದ ವಿಶ್ವರೂಪವನ್ನು ನೋಡು. ಆ ಸಮಯದಲ್ಲಿ ಅರ್ಜುನನು ರೋಮಾಂಚನದಿಂದ ಆಶ್ಚರ್ಯಭರಿತನಾಗಿ ಶ್ರೀಕೃಷ್ಣನಿಗೆ ಶಿರಸಾವಹಿಸಿ ಕೈಜೋಡಿಸಿ ನುಡಿದ.

*ಅರ್ಜುನ ಉವಾಚ :*
*ಪಶ್ಯಾಮಿ ದೇವಾಂಸ್ತವ ದೇವ ದೇಹೇ*
*ಸರ್ವಾಂಸ್ತಥಾ ಭೂತವಿಶೇಷಸಂಘಾನ್ ।*
*ಬ್ರಹ್ಮಾಣಮೀಶಂ ಕಮಲಾಸನಸ್ಥಂ*
*ಋಷೀಂಶ್ವ ಸರ್ವಾನುರಗಾಂಶ್ಚ ದಿವ್ಯಾನ್ ॥*

ಅರ್ಜುನ ಹೇಳಿದನು : ದೇವ, ನಿನ್ನ ಮೈಯಲ್ಲಿ ದೇವತೆಗಳನ್ನೆಲ್ಲ ಕಾಣುತ್ತಿದ್ದೇನೆ. ಬಗೆಬಗೆಯ ಜೀವಿಗಳ ಸಮುದಾಯವನ್ನೂ, ಬ್ರಹ್ಮ ಮತ್ತು ಶಿವನನ್ನೂ, ಎಲ್ಲಾ ಋಷಿಗಳನ್ನೂ ಮತ್ತು ದಿವ್ಯ ಶಕ್ತಿಯ ಸರ್ಪಗಳನ್ನೂ ನೋಡುತ್ತಿದ್ದೇನೆ.

*ಕಿರೀಟನಂ ಗದಿನಂ ಚಕ್ರಿಣಂ ಚ*
*ತೇಜೋರಾಶಿಂ ಸರ್ವತೋ ದೀಪ್ತಿಮಂತಮ್ ।*
*ಪಶ್ಯಾಮಿ ತ್ವಾ ದುರ್ನಿರೀಕ್ಷ್ಯಂ ಸಮಂತಾತ್*
*ದೀಪ್ತಾನಲಾರ್ಕದ್ಯುತಿಪ್ರಮೇಯಮ್ ॥*

ಕಿರೀಟ, ಗದೆ, ಚಕ್ರವನ್ನು ಧಾರಣೆ ಮಾಡಿ, ಬೆಳಕಿನ ಮುದ್ದೆಯಾಗಿ ಎಲ್ಲೆಡೆಯೂ ಕೋರಯಿಸುವ ರೂಪ, ಅಸಾಧ್ಯ ಸೂರ್ಯತೇಜಸ್ಸು ಇರುವ ನಿನ್ನನ್ನು ಕಾಣುತ್ತಿದ್ದೇನೆ.

*ತ್ವಮಕ್ಷರಂ ಪರಮಂ ವೇದಿತವ್ಯಂ*
*ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।*
*ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ*
*ಸನಾತನಸ್ತ್ವಂ ಪುರುಷೋ ಮತೋ ಮೇ ॥*

ನೀನು ಅಳಿವಿರದವನು. ಅರಿಯಬೇಕಾದ ಹಿರಿಯ ತತ್ವ. ನೀನು ಈ ಜಗಕ್ಕೆಲ್ಲ ಹಿರಿಯಾಸರೆ. ನೀನು ಬದಲಾಗದವನು. ಸನಾತನ ಧರ್ಮವನ್ನು ಸಲಹುವವನು. ನೀನು ಪುರಾಣ ಪುರುಷೋತ್ತಮನು ಎಂದು ನನ್ನ ಹೃದಯ ಹೇಳುತ್ತಿದೆ.

*ಸ್ಥಾನೇ ಹೃಷಿಕೇಶ ತವ ಪ್ರಕೀರ್ತ್ಯಾ*
*ಜಗತ್ ಪ್ರಹೃಷ್ಯತ್ಯನುರಜ್ಯತೇ ಚ ।*
*ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ*
*ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥*

ಅರ್ಜುನ ಹೇಳಿದನು : ಕೃಷ್ಣ, ಜಗತ್ತು ನಿನ್ನ ಕೊಂಡಾಟದಿಂದ ಹರ್ಷ ಹೊಂದುತ್ತದೆ. ನಿನ್ನ ಮೇಲೆ ಹೆಚ್ಚು ಪ್ರೀತಿಯನ್ನು ಮಾಡುತ್ತದೆ. ರಕ್ಕಸರು ಹೆದರಿ ದಿಕ್ಕುದಿಕ್ಕಿಗೂ ಓಡಿ ಹೋಗುತ್ತಿದ್ದಾರೆ. ಸಿದ್ಧರ ಗುಂಪೆಲ್ಲ ಅಡ್ಡಬೀಳುತ್ತಿದ್ದಾರೆ. ಇದೆಲ್ಲ ಸರಿಯೆ.

*ಭಗವಾನುವಾಚ :*
*ಮಯಾ ಪ್ರಸನ್ನೇನ ತವಾರ್ಜುನನೇದಂ*
*ರೂಪಂ ಪರಂ ದರ್ಶಿತಮಾತ್ಮಯೋಗಾತ್ ।*
*ತೇಜೊಮಯಂ ವಿಶ್ವಮನಂತಮಾದ್ಯಂ*
*ಯನ್ಮೇ ತ್ವದನ್ಯೇನ ನ ದೃಷ್ಟಪೂರ್ವಮ್ ॥*

ಕೃಷ್ಣ ಹೇಳಿದನು : ಅರ್ಜುನ, ಬೇರೆ ಯಾರೂ ಎಂದೂ ಕಂಡಿರದ, ಬೆಳಕಿನಿಂದ ತುಂಬಿದ, ಎಲ್ಲಕ್ಕು ಕಾರಣವಾದ, ನನ್ನ ಈ ಅನಂತವಾದ ಹಿರಿಯ ವಿಶ್ವರೂಪವನ್ನು ನಾನು ನನ್ನ ಸಾಮರ್ಥ್ಯದಿಂದ ನಿನ್ನ ಮೇಲೆ ಅನುಗ್ರಹಿಸಿ ತೋರಿಸಿದೆನು.

ಕೃಷ್ಣ ಮರಳಿ ಅರ್ಜುನನಿಗೆ ತನ್ನ ಕೃಷ್ಣರೂಪವನ್ನು ತೋರಿಸಿದ.

*ಅರ್ಜುನ ಉವಾಚ :*
*ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯ ಜನಾರ್ದನ ।*
*ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ ॥*

ಅರ್ಜುನ ಹೇಳಿದನು : ಜನಾರ್ದನ, ಮನುಷ್ಯಾಕಾರದ ನಿನ್ನ ಈ ಸೌಮ್ಯ ರೂಪವನ್ನು ಕಂಡು ಜೀವ ಬಂತು. ಚೇತರಿಸಿಕೊಂಡು ಸಹಜ ಸ್ಥಿತಿಗೆ ಮರಳಿದೆ.

*ಭಗವಾನುವಾಚ :*
*ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋರ್ಜುನ ।*
*ಜ್ಞಾತುಂ ದ್ರಷ್ಟುಂ ಚ ತತ್ವೇನ ಪ್ರವೇಷ್ಟುಂ ಚ ಪರಂತಪ ॥*

ಕೃಷ್ಣ ಹೇಳಿದನು : ಅರ್ಜುನ, ಅನನ್ಯವಾದ ಭಕ್ತಿಯಿಂದ ಮಾತ್ರವೇ ನನ್ನನ್ನು ತಿಳಿಯುವುದಕ್ಕೂ, ಸಾಕ್ಷಾತ್ಕರಿಸುವುದಕ್ಕೂ, ನನ್ನೊಳಗೆ ಸೇರುವುದಕ್ಕೂ ಸಾಧ್ಯ.

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2021-2022

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ ಮತ್ತು ಬ್ಯಾಂಕಿನ ಖಾತೆಯ ವಿವರ ಸಹಿತ ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.15-11-2021ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2021-2022**

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ‘‘ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ’’ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2021-2022**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.15-11-2021**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2021-2022

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.15-11-2021**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಉದಯಚಂದ್ರ ಪ್ರತಿಭಾ ಪುರಸ್ಕಾರ 2021-2022

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2020-21**ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.15-11-2021**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.**

### ಪ್ರತಿಭಾ ಪುರಸ್ಕಾರ

2020-21 ರ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (ಎಸ್.ಎಸ್.ಎಲ್.ಸಿ.) ಮತ್ತು ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (ಪಿ.ಯು.ಸಿ.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈರಸ್ತೆ, ಕರಂಗಲ್ಪಾಡಿ, ಮಂಗಳೂರು 4 ಇಲ್ಲಿ ಮುಂಬರುವ ದಿನಗಳಲ್ಲಿ ನಡೆಯುವ ಯಾವುದೇ ಕಾರ್ಯಕ್ರಮದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ತಾ.30.09.2021** ರ ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**-ಕೆ. ಸದಾಶಿವ ಶಾಸ್ತ್ರೀ, 8762235801**

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2021-22ನೇ ಸಾಲಿನ ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನ**ಕ್ಕಾಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-11-2021**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನ ರಾವ್,**

ಇಂಚರ ಸರ್ಜಿಕಲ್ ಕ್ಲಿನಿಕ್. ಎ.ಜೆ.ಅಲ್ಸೆ ರಸ್ತೆ, ಪ್ರಸಾದ ನೇತ್ರಾಲಯದ ಎದುರು, ಉಡುಪಿ-576101

ಕವನ

## ನಿಗೂಢ

1. ಕಣ್ಣಿಗೆ ಕಾಣಲಾಗದ ಕ್ರಿಮಿ...!
ಕೈಯಲ್ಲಿ ಹಿಡಿಯಲಾಗದ ಸೂಕ್ಷ್ಮಾಣು ಜೀವಿ...!!
2. ಗಾಳಿಯಂತೆ ಎಲ್ಲೆಡೆ ಪ್ರಸಾರವಾಗುತ್ತಿದೆ ಸೋಂಕು...!
ವಿಷದಂತೆ ಎಲ್ಲರನ್ನೂ ಆವರಿಸುತ್ತಿದೆ ನಂಜು...!!
3. ಊಹೆಗೂ ನಿಲುಕದ ಮಾಯಾವಿ...!
ಕ್ಷಣಕ್ಷಣಕ್ಕೂ ಬಣ್ಣ ಬದಲಾಯಿಸುವ ಊಸರವಳ್ಳಿ...!!
4. ಅಲ್ಲೋಲಕಲ್ಲೋಲವಾಯಿತು ವಿಶ್ವ ಆರ್ಥಿಕತೆ...!
ಅಸ್ತವ್ಯಸ್ತವಾಯಿತು ಶಿಕ್ಷಣ ವ್ಯವಸ್ಥೆ...!!
ಒತ್ತಡಕ್ಕೊಳಗಾಯಿತು ಆರೋಗ್ಯ ಇಲಾಖೆ...!!!
5. ಬಳಲಿ ಬೆಂಡಾದರು ಚಿಣ್ಣರು...!
ಸೋತು ಸುಣ್ಣವಾದರು ಪೋಷಕರು...!!
ಹೆದರಿ ಕಂಗಲಾದರು ಹಿರಿಯರು...!!!
6. ಅನಾಥರಾದರು ಸಾವಿರ...!
ಸಾವಿಗೀಡಾದರು ಲಕ್ಷಾಂತರ...!!
ಸಂಕಷ್ಟಕ್ಕೊಳಗಾದರು ಕೋಟ್ಯಾಂತರ...!!!
7. ದಾನಿಗಳು ಉದಯಿಸಿದರು ವಿಧವಿಧದಲ್ಲಿ...!
ಜನಸೇವೆ ಗೈದರು ಬಗೆಬಗೆಯಲ್ಲಿ...!!
8. ಓಗೊಡಲಿಲ್ಲ ನಮ್ಮ ಸಂಕಟಕ್ಕೆ ವೆಂಕಟರಮಣ...!
ಪ್ರಕೃತಿ ಪೂಜೆಯೂ ಅನಿವಾರ್ಯ ಹರಹರ ಮಹಾದೇವ...!!
9. ಕಾಲಚಕ್ರದ ಗತಿಯನ್ನು ಕಂಡವರಿಲ್ಲ...!
ಬದುಕಿನ ನಿಗೂಢತೆಯನ್ನು ಅರಿತವರಿಲ್ಲ...!!
10. ಅದೃಶ್ಯ ರೂಪದ ನಾಟಕಕಾರ...!
ಕೊರೊನಾ ನಿನಗೆ ತಿರಸ್ಕಾರ...!!

–ಮಲ್ಲಿಕ್, ಉಳಿಯಾರು, ಜಂಗಮವಾಣಿ : 9945885088

-: ಶುಭಾಶಯಗಳು :-
“ಶ್ರೀ ಶಾರದಾಂಬೆಗೆ ವಂದಿಸುತ್ತಾ
“ಶ್ರೀ ಶಾರದಾ” ಪತ್ರಿಕೆಯು ನವರಸಭರಿತಳಾಗಿ ಸಮಾಜಕ್ಕೆ ದಾರಿದೀಪವಾಗಲಿ” ಎಂದು ಹಾರೈಸುವ
ಜಿ.ಕೆ.ಕೋಲ್ವೆ, ಉಡುಪಿ
ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು,
ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

With Best Complimemts From
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com



ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655



Buying and selling shares as easy as checking your emails
Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO’s
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do’s & Don'ts by NCDEX. (Subbroker Regn.Nos: BSE: INS010606122;NSE: INS23106924)

# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ



–ಡಾ.ಬಿ ಜನಾರ್ದನ ಭಟ್

ಮುಳಿಯ ಪರಂಪರೆಯಲ್ಲಿ ಕಡೆಂಗೋಡ್ಲು ಶಂಕರ ಭಟ್ಟರು ಪ್ರಧಾನ ಕವಿಗಳಾಗಿದ್ದಾರೆ. ಅ.ಗೌ.ಕಿನ್ನಿಗೋಳಿ, ಕಯ್ಯಾರ ಕಿಂಞಣ್ಣ ರೈಗಳು, ಎಸ್. ವೆಂಕಟರಾಜರು ಮುಂತಾದವರು ಇದೇ ಪರಂಪರೆಯಲ್ಲಿ ಹೊಸತನವನ್ನು ಮತ್ತು ಸ್ವಂತಿಕೆಯನ್ನು ಕಂಡುಕೊಂಡು ಮುನ್ನಡೆಸಿದವರು.

**ಪಾವಂಜೆ ಹರಿದಾಸರ ಮಹತ್ವ :** ಈ ಹಿನ್ನೆಲೆಯಲ್ಲಿ ಪಾವಂಜೆ ಹರಿದಾಸರ ಕವಿತ್ವವನ್ನು ಪರಿಚಯಿಸಿಕೊಳ್ಳುವುದೆಂದರೆ ಸಮಾಜದಲ್ಲಿ ಪದ್ಯಗಳಿಗೆ ಇದ್ದ ಸಾಂಸ್ಕೃತಿಕ ಮಹತ್ವ, ಅವುಗಳು ಸಮಾಜದಲ್ಲಿ ನಿರ್ವಹಿಸಿದ ಕರ್ತವ್ಯದ (function) ಸ್ವರೂಪ ಏನು ಎನ್ನುವುದನ್ನು ಕುರಿತು ಚಿಂತಿಸುವ ಅವಕಾಶವೂ ಹೌದು. ರೂಪನಿಷ್ಠ ವಿಮರ್ಶಕರು ಕವಿತೆಯೊಂದನ್ನು ಸಾವಯವ ಸಮಗ್ರೀಕರಣವುಳ್ಳ ರಚನೆ ಎಂದು ಕರೆಯುತ್ತಾರೆ. ಒಂದು ಉತ್ತಮ ಕವಿತೆಯನ್ನು ಒಮ್ಮೆ ರಚನೆ ಮಾಡಿ ಸಮಾಜದಲ್ಲಿ ಬಿಟ್ಟ ಮೇಲೆ ಅದು ಒಂದು ಸ್ವಾಯತ್ತ ಘಟಕವಾಗಿ ಸಮಾಜದಲ್ಲಿ ಇರುತ್ತದೆ. ಉದಾಹರಣೆಗೆ, ಹರಿದಾಸರು ಹರಿಕಥೆ ನಡೆಸುತ್ತಿರುವಾಗ ಸಭೆಯಲ್ಲಿ ಕುಳಿತಿದ್ದ ಇಬ್ಬರು ಶ್ರೀಮಂತರು ಗಟ್ಟಿಯಾಗಿ ಹರಟೆ ಹೊಡೆಯುತ್ತಾ ರಸಭಂಗ ಮಾಡುತ್ತಿದ್ದರು; ಆಗ ಪಾವಂಜೆಯವರು ಒಂದು ಪದ್ಯವನ್ನು ಕಟ್ಟಿ, ಅವರನ್ನು ಖಂಡಿಸಿ ಹರಿಕಥೆಯನ್ನು ನಿಲ್ಲಿಸುತ್ತಾರೆ. (ಈ ಪದ್ಯವನ್ನು ಮುಂದೆ ಉಲ್ಲೇಖಿಸಲಾಗಿದೆ). ಅವರು ಇಂತಹ ಪದ್ಯವೊಂದನ್ನು ರಚಿಸದೆಯೆ ಸುಮ್ಮನೆ ಕುಳಿತುಬಿಡಬಹುದಾಗಿತ್ತು. ಪದ್ಯ ರಚಿಸುವುದು ಅಷ್ಟು ಸುಲಭವಲ್ಲ. ಅದಕ್ಕೆ ಅವರು ತಮ್ಮ ಬೌದ್ಧಿಕ ಮತ್ತು ಭಾವನಾತ್ಮಕ ಸ್ಪಂದನವನ್ನೂ, ಭಾಷಾಜ್ಞಾನವನ್ನೂ, ಲೋಕಜ್ಞಾನವನ್ನೂ ಬಳಸಿಕೊಳ್ಳಬೇಕು. ಹೀಗೆ ಮಾಡಿ ಅವರು ಸೃಷ್ಟಿಸಿದ ರೂಪವೇ ಆ ಕವಿತೆ. ಅದನ್ನು ಅವರು ಮಾಡದಿದ್ದರೆ (ಸುಮ್ಮನೆ ಹರಿಕಥೆಯನ್ನು ನಿಲ್ಲಿಸಿ ಹೊರಟುಹೋಗಿದ್ದರೆ) ಈ ಘಟನೆಯು ನಮ್ಮ ಕಾಲದವರೆಗೆ ತಲುಪುತ್ತಿರಲಿಲ್ಲ. ಈ ಕವಿತೆಯ ಮೂಲಕ ಆ ಘಟನೆಯೂ, ಒಂದು ಅಸಾಂಸ್ಕೃತಿಕ ವರ್ತನೆಗೆ ಒಂದು ಸಾಂಸ್ಕೃತಿಕ ಪ್ರತಿಕ್ರಿಯೆಯೂ ಜೀವಂತವಾಗಿ ಉಳಿದುಬಿಟ್ಟಿತು. ಕವಿ ಗೋಪಾಲಕೃಷ್ಣ ಅಡಿಗರು, ತುರ್ತು ಪರಿಸ್ಥಿತಿ ಘೋಷಣೆಯಾದ ದಿನ ತಮ್ಮ ಆತ್ಮೀಯರ ಬಳಿ ನಾವೊಂದು ಬಾಂಬ್ ತಯಾರಿಸಬೇಕು ಎಂದರಂತೆ. ಮರುದಿನ ಅವರು ತಂದು ಓದಿದ್ದು ಒಂದು ಕವಿತೆಯನ್ನು – ಎನ್ನುವುದು ಕೂಡ ಇದೇ ರೀತಿಯ ಒಂದು ವಿದ್ಯಮಾನ.

ಪಾವಂಜೆ ಹರಿದಾಸರು ತಮ್ಮ ಕಾಲದಲ್ಲಿ ಮಂಗಳೂರು, ಬಂಟ್ವಾಳ, ಮುಲ್ಕಿ, ಕಾರ್ಕಳ ಮತ್ತು ಉಡುಪಿ ತಾಲೂಕುಗಳಲ್ಲಿ ಸಂಚರಿಸುತ್ತಾ ಹರಿಕಥೆಯ ಮೂಲಕ ಒಂದು ಸಾಂಸ್ಕೃತಿಕ ಎಚ್ಚರವನ್ನು ಮೂಡಿಸಿದವರು. ಇದನ್ನು ಪ್ರೊ. ಹೆರಂಜೆ ಕೃಷ್ಣ ಭಟ್ಟರು ಮತ್ತು ಡಾ. ಪಾದೆಕಲ್ಲು ವಿಷ್ಣು ಭಟ್ಟರು ಗ್ರಹಿಸಿರುವುದು ಹೀಗೆ: ಕ್ರಿಸ್ತಶಕ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಹರಿದಾಸರು ಕಾರ್ಯತತ್ಪರರಾಗಿದ್ದರು. ಆ ಕಾಲದಲ್ಲಿ ಅಲ್ಲಲ್ಲಿ ಹರಿಕಥೆಗಳನ್ನು ಮಾಡಿ ಜನರಂಜನೆಯನ್ನೂ, ಜನಶಿಕ್ಷಣವನ್ನೂ, ಸಂಸ್ಕೃತಿ ಮತ್ತು ಧರ್ಮಪ್ರಸಾರವನ್ನೂ ಒಟ್ಟಿಗೇ ಮಾಡುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಉತ್ತರಭಾಗದಲ್ಲಿ ಕರಾವಳಿಯುದ್ದಕ್ಕೂ ಕ್ರೈಸ್ತ ಮಿಶನರಿಗಳ ಧಾರ್ಮಿಕ ಪ್ರಸಾರ ಕಾರ್ಯ ನಡೆಯುತ್ತಿದ್ದು ಅದರಿಂದಾಗಿ ಆ ಧರ್ಮಕ್ಕೆ ಮತಾಂತರವೂ ನಡೆಯುತ್ತಿತ್ತು.

ಮಿಶನರಿಗಳು ಅಲ್ಲಲ್ಲಿ ಜನಸೇರುವ ಸ್ಥಳಗಳಲ್ಲಿ, ಸಂತೆಗಳಲ್ಲಿ, ಜಾತ್ರೆಗಳಲ್ಲಿ ಜನಸಮೂಹವನ್ನು ಕುರಿತು ಕೂಗಿ ಹೇಳಿ ತಮ್ಮ ಧರ್ಮಕ್ಕೆ ಆಹ್ವಾನಿಸುವ ಕಾರ್ಯವನ್ನು ಮಾಡುತ್ತಿದ್ದರು. ಇದನ್ನು ಪತಿತರಿಗೆ ಧರ್ಮಬೋಧೆ’’ (Sermon to the Heathen) ಎನ್ನುತ್ತಿದ್ದರು. ಆ ಕಾಲದ ಕೆಲವು ಹರಿದಾಸರು ಅವರ ಈ ರೀತಿಯ ಕಾರ್ಯಕ್ಕೆ ಪ್ರತಿಯಾಗಿ ಧಾರ್ಮಿಕ ಕಥೆಗಳನ್ನು ರಂಜಕವಾಗಿ ತಿಳಿಸಿ ಹೇಳುವ ಮೂಲಕ ಧರ್ಮಪ್ರಜ್ಞೆಯನ್ನು ಬೆಳೆಸುವ ಕೆಲಸವನ್ನು ನಿರ್ವಹಿಸಿರುವುದು ತಿಳಿದು ಬರುತ್ತದೆ. ಹರಿದಾಸ ಲಕ್ಷ್ಮೀನಾರಾಯಣಪ್ಪಯ್ಯನವರೂ ಇದೇ ಕಾಲದಲ್ಲಿ ತಮ್ಮ ಹರಿಕಥಾ ಪ್ರವಚನ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು – ಎಂಬುದು ಸಾಂಸ್ಕೃತಿಕ ದೃಷ್ಟಿಯಿಂದಲೂ ಐತಿಹಾಸಿಕ ದೃಷ್ಟಿಯಿಂದಲೂ ಮುಖ್ಯವಾದ ವಿಚಾರವಾಗಿದೆ. (ಹರಿದಾಸ ಕೀರ್ತನ. ಸಂಪಾದಕರು – ಡಾ. ಪಾದೇಕಲ್ಲು ವಿಷ್ಣು ಭಟ್ಟ ಮತ್ತು ಪ್ರೊ. ಹೆರಂಜೆ ಕೃಷ್ಣ ಭಟ್ಟ). ಹೀಗೆ, ಹರಿದಾಸರಾಗಿ ಅವರು ನಿರ್ವಹಿಸಿದ ಸಾಮಾಜಿಕ ಜವಾಬ್ದಾರಿ ಮತ್ತು ಸಾಂಸ್ಕೃತಿಕ ಅರಿವಿನ ಕೆಲಸಗಳು ಮಾಪನಕ್ಕೆ ಸಿಗದಂತಹ ಕೆಲಸಗಳಾದರೂ, ಆ ಕಾಲದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಸನ್ನಿವೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡರೆ ಗ್ರಹಿಸಬಹುದಾದ ಸಂಗತಿ.

**ಪಾವಂಜೆಯವರ ಬದುಕು :** ಹರಿದಾಸ ಪಾವಂಜೆ ಶ್ರೀ ಲಕ್ಷ್ಮೀನಾರ್ಣಪ್ಪಯ್ಯನವರು ಕ್ರಿ.ಶ. 1854ನೇ ಇಸವಿಯಲ್ಲಿ ದಕ್ಷಿಣ ಕನ್ನಡದ ಮೂಲ್ಕಿಯ ಸಮೀಪ ಅತ್ತೂರು ಎಂಬಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ಶ್ರೀ ವೆಂಕಟಕೃಷ್ಣಯ್ಯ ಎಂಬವರ ಎರಡನೇ ಮಗನಾಗಿ ಜನಿಸಿದರು. ತಮ್ಮ ಇಳಿವಯಸ್ಸಿನಲ್ಲಿ ಪಾವಂಜೆ ದೇವಸ್ಥಾನವನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಂಡದ್ದರಿಂದ ಅವರು ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ’ ಎಂದು ಪ್ರಸಿದ್ಧರಾಗಿದ್ದಾರೆ.

(ಮುಂದುವರಿಯುವುದು...)


## ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ

ಮುಲ್ಲಡ್ಕ, ಅಂಚೆ : ಮುಂಡ್ಕೂರು–576121, ಕಾರ್ಕಳ ತಾಲೂಕು

ಭಕ್ತ ಮಹಾಜನರೇ,

**ಸ್ವಸ್ತಿ! ಶ್ರೀ ಪ್ಲವ ನಾಮ ಸಂವತ್ಸರದ ಆಶ್ವಯುಜ ಪಾಡ್ಯದಿಂದ ನವಮಿ ಪರ್ಯಂತ ದಿನಾಂಕ 07.10.2021 ರಿಂದ ದಿನಾಂಕ 15.10.2021 ರ ವರೆಗೆ ವರ್ಷಂಪ್ರತಿ ನಡೆಯುವ**

**ನವರಾತ್ರ ಮಹೋತ್ಸವವು**

ಜರಗಲಿರುವುದು.

ತಾವೆಲ್ಲರೂ ಬಂದು ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ, ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಅನ್ನಪೂರ್ಣೇಶ್ವರೀ ದೇವರ ವಿಶೇಷ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

– ಬಿ.ವಿ.ರಾವ್
ಆಡಳಿತ ಮೊಕ್ತೇಸರರು (9880201725, 9980920013)

**ಧನಸಹಾಯ ನೀಡುವವರು Canara Bank Mundkur, S.B. A/c No. 01462200004068 (IFSC No. CNRB0010146) ಇದಕ್ಕೆ ಕಳುಹಿಸಬೇಕಾಗಿ ವಿನಂತಿ. ಖಾತೆಗೆ ಹಣ ಕಳುಹಿಸಿದಲ್ಲಿ ದೂರವಾಣಿ ಅಥವಾ ಇ–ಮೇಲ್ ಮೂಲಕ ದಯವಿಟ್ಟು ತಿಳಿಸಬೇಕಾಗಿ ವಿನಂತಿ.**



Ph : 98459 92859

**Ganesh Hebbar & Associates**

CHARTERED ACCOUNTANT

S.M.S.P. Complex, Udupi - 576 101.











**RAJESH POWER PRESS**

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**



**ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘**ಪಾರಾಯಣ**’’ ಸಂಜೆ ಗಂಟೆ 4–30ರಿಂದ

**ತಾ.24-09-2021 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.11-10-2021 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.26-09-2021 ಮತ್ತು ತಾ.10-10-2021 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


## ಕನ್ಯಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 16–09–2021 | ಕನ್ಯಾ ಸಂಕ್ರಮಣ | | ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಪೂಜೆ ಆರಂಭ, ದುರ್ಗಾನಮಸ್ಕಾರ ಪೂಜೆ ಆರಂಭ |
| 19–09–2021 | ಅನಂತ ಚತುರ್ದಶಿ | | |
| 20–09–2021 | ಹುಣ್ಣಿಮೆ | | |
| 21–09–2021 | ವರ್ಷಋತು ಭಾದ್ರಪದ ಮಾಸದ ಕೃಷ್ಣಪಕ್ಷಾರಂಭ, ಪಿತೃಪಕ್ಷ, ಮಹಾಲಯ ಆರಂಭ | 10–10–2021 | ಲಲಿತಾ ಪಂಚಮಿ |
| | | 11–10–2021 | ಶ್ರೀ ಶಾರದಾ ಪ್ರತಿಷ್ಠೆ ಹಾಗೂ ಪೂಜಾರಂಭ |
| 24–09–2021 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.48 | 14–10–2021 | ಮಹಾನವಮಿ–ಆಯುಧ ಪೂಜಾ |
| 02–10–2021 | ಸರ್ವೈಕಾದಶಿ | 15–10–2021 | ವಿಜಯದಶಮಿ, ಶಾರದಾ ವಿಸರ್ಜನಂ, ಶ್ರೀ ಶಾರದಾ ಮಂಟಪದಲ್ಲಿ ಚಂಡಿಕಾ ಹೋಮ |
| 06–10–2021 | ಮಹಾಲಯ ಅಮಾವಾಸ್ಯೆ | | |
| 07–10–2021 | ಶರದೃತು ಅಶ್ವಯುಜ ಮಾಸದ ಶುಕ್ಲಪಕ್ಷಾರಂಭ, ನವರಾತ್ರಿ ಆರಂಭ | 16–10–2021 | ಸರ್ವೈಕಾದಶಿ |
| | | 17–10–2021 | ತುಲಾ ಸಂಕ್ರಮಣ |


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**


**ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.**

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O), Mobile : 9845149521**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ನೆನಪಿನ ಅಂಗಳದಿಂದ "ಮಂಜುಳಾ ಯಕ್ಷಗಾನ ಕಲಾಸಂಘ"ದ ರೂವಾರಿ–ಡಾ| ಕೆ. ನಾರಾಯಣ ಶಾಸ್ತ್ರೀ....

ಲೇಖನ:
ಕೆ. ದಿನಮಣಿ ಶಾಸ್ತ್ರೀ, ಬ್ರಹ್ಮಾವರ.





ಐವತ್ತು ವರುಷಗಳ ಹಿಂದಿನ(1971) ನೆನಪು, ಉಡುಪಿ ಸಮೀಪದ ಕಟಪಾಡಿ ಪೇಟೆಯಲ್ಲಿನ ಕಟ್ಟಡದ ಮೇಲಂತಸ್ತಿನಲ್ಲಿದ್ದ ಮಂಜುಳಾ ಆಯುರ್ವೇದಿಕ್ ಡಿಸ್ಪೆನ್ಸರಿಯಲ್ಲಿ ಭಾನುವಾರ ನಾಲ್ಕುವರೆ ಗಂಟೆಯಾಗುತ್ತಿದ್ದಂತೆ ಚೆಂಡೆಯ ಸದ್ದು. ಇದನ್ನು ಆಲಿಸಿದ ಯಕ್ಷಗಾನಾಸಕ್ತ ಜನರು ಡಿಸ್ಪೆನ್ಸರಿಯಲ್ಲಿ ಜೋಡಿಸಿರುವ ಹತ್ತಾರು ಬೆಂಚುಗಳಲ್ಲಿ ಆಸೀನರಾಗುತ್ತಿದ್ದಂತೆ ತಾಳಮದ್ದಲೆ ಕಾರ್ಯಕ್ರಮ ಆರಂಭವಾಗುತ್ತದೆ. ಹೌದು! ಇದು ಮಂಜುಳಾ ಯಕ್ಷಗಾನ ಕಲಾಸಂಘದ ಪ್ರತೀ ಭಾನುವಾರದ ಕಾರ್ಯಕ್ರಮ. ಇದರ ರೂವಾರಿ ಆಯುರ್ವೇದ ವೈದ್ಯ ಡಾ| ಕೆ. ನಾರಾಯಣ ಶಾಸ್ತ್ರೀಯವರು. ಇವರು ಕಟಪಾಡಿ ಸಮೀಪದ ಮಟ್ಟು ಗ್ರಾಮದ ಹತ್ತಾರು ಯಕ್ಷಗಾನ ಕಲಾವಿದರನ್ನು ಒಗ್ಗೂಡಿಸಿ ಈ ಸಂಘವನ್ನು ಸ್ಥಾಪಿಸಿದರು. ಭಾಗವತರಾಗಿ ಶ್ರೀ ಟಿ. ವಿ. ರಾವ್, ಮದ್ದಲೆಗಾರರಾಗಿ ಶ್ರೀ ಸುಬ್ಬ ರಾವ್, ಚೆಂಡೆವಾದಕರಾಗಿ ಶ್ರೀ ಗೋವರ್ಧನ ರಾವ್ ಸಹಕರಿಸುತ್ತಿದ್ದರೆ, ಅರ್ಥಧಾರಿಗಳಾಗಿ ಶಾಸ್ತ್ರಿಗಳೊಂದಿಗೆ ಶ್ರೀ ಪೊಲ್ಯ ದೇಜಪ್ಪ ಶೆಟ್ಟಿ, ಶ್ರೀ ವೈ. ಹರಿಶ್ಚಂದ್ರ ರಾವ್, ಶ್ರೀ ಆರ್. ಕೃಷ್ಣ ರಾವ್, ಶ್ರೀ ಕೆ. ರಘುರಾಮ ಶೆಟ್ಟಿ, ಶ್ರೀ ಮಾಧವ ಭಟ್, ಶ್ರೀ ವೆಂಕಟಾಚಲ ಭಟ್, ಶ್ರೀ ಅಗಳಿ ಕೃಷ್ಣರಾವ್, ಶ್ರೀ ಕೃಷ್ಣ ಕುಮಾರ್ ರಾವ್, ಶ್ರೀ ಮಧುಕರ ಮಲ್ಯ, ಶ್ರೀ ಸುಬ್ರಾಯರು, ಶ್ರೀ ಶ್ರೀಧರ ಶೆಟ್ಟಿ, ಶ್ರೀ ದಾಸಪ್ಪ ಶೆಟ್ಟಿ, ಹೀಗೆ ಇನ್ನೂ ಅನೇಕ ಹಿರಿಕಿರಿಯ ಕಲಾವಿದರು ಸಹಕರಿಸುತ್ತಿದ್ದರು. ಸಂಘದ ವಾರ್ಷಿಕೋತ್ಸವವನ್ನು ಸಮೀಪದ ಪ್ರಾಥಮಿಕ ಶಾಲೆಯಲ್ಲಿ ನೂರಾರು ಜನರ ಸಮ್ಮುಖದಲ್ಲಿ ಆಚರಿಸುತ್ತಿದ್ದು, ಅಂದು ಶ್ರೀ ಕೊಳ್ಯೂರು ರಾಮಚಂದ್ರ ರಾವ್, ಶ್ರೀ ಸಾಂತೂರು ಸದಾಶಿವ ರಾವ್, ಶ್ರೀ ಎಮ್. ಎಲ್. ಸಾಮಗ, ಶ್ರೀ ಡಿ. ಜಿ. ಹೆಗಡೆ ಹೀಗೆ ಬಹಳಷ್ಟು ಖ್ಯಾತನಾಮರು ಅರ್ಥಧಾರಿಗಳಾಗಿ ಬಂದು ಸಂಘದ ಕೀರ್ತಿಗೆ ಕಾರಣರಾಗಿದ್ದರು. ಹೀಗೆ ಬೆಳೆದ ಈ ಸಂಘ ಆಸಕ್ತರ ಮನೆಗಳಲ್ಲಿ, ಉಡುಪಿಯ ರಾಜಾಂಗಣ, ಕುಂಜಾರುಗಿರಿ, ಬೆಳ್ಳೆ, ಶಿರ್ವ, ಸೂಡಾ, ಮಟ್ಟು ಜೊತೆಗೆ ಇನ್ನೂ ಅನೇಕ ಊರಿನ ದೇವಸ್ಥಾನಗಳ ಉತ್ಸವ ಮತ್ತು ನವರಾತ್ರಿ ಸಂದರ್ಭಗಳಲ್ಲಿ ತಾಳಮದ್ದಲೆ ಹಾಗೂ ಯಕ್ಷಗಾನ ಕಾರ್ಯಕ್ರಮವನ್ನು ನೀಡುವಷ್ಟರ ಮಟ್ಟಿಗೆ ಬೆಳೆಯಿತು. ಸಂಘದ ಸದಸ್ಯರಿಗೆ ತರಬೇತಿ ನೀಡುತ್ತಿದ್ದವರು ಖ್ಯಾತ ಯಕ್ಷಗಾನ ಕಲಾವಿದರಾದ ಶ್ರೀ ಬನ್ನಂಜೆ ಸಂಜೀವ ಸುವರ್ಣರು ಮತ್ತು ಬಿ. ನಾರಾಯಣರು. ವೇಷ ಭೂಷಣಗಳಲ್ಲಿ ಸಹಕರಿಸುತ್ತಿದ್ದವರು ಬ್ರಹ್ಮಾವರದ ಶ್ರೀ ಗಜಾನನ ಯಕ್ಷಗಾನದ ಶ್ರೀ ಬಾಲಕೃಷ್ಣ ನಾಯಕರು. ಖ್ಯಾತ ಭಾಗವತರಾದ ಶ್ರೀ ಜಿ. ಆರ್. ಕಾಳಿಂಗ ನಾವುಡರೂ ಬಂದು ಭಾಗವತಿಕೆ ಮಾಡಿ ಸಲಹೆಗಳನ್ನು ನೀಡುತ್ತಿದ್ದರು. ಅಂದಿನ ದಿನಗಳಲ್ಲಿ ಮಂಗಳೂರು ಆಕಾಶವಾಣಿ ಪ್ರತೀ ಬುಧವಾರ ರಾತ್ರಿ ಏಳುವರೆ ಗಂಟೆಗೆ ಬಿತ್ತರಿಸುತ್ತಿದ್ದ ತಾಳಮದ್ದಲೆಯಲ್ಲಿ ಈ ಸಂಘದ ಕಾರ್ಯಕ್ರಮವೂ ಇರುತ್ತಿದ್ದುದು ಸಂತಸದ ವಿಚಾರವಾಗಿತ್ತು. ಉಡುಪಿಯಲ್ಲಿ ಖ್ಯಾತ ಚಿತ್ರಕಲಾವಿದರಾಗಿದ್ದ ಶ್ರೀ ಜಿ. ಎಸ್. ಶೆಣ್ಯೈ ಇವರು ಸ್ಥಾಪಿಸಿದ ಸೌತ್ ಕೆನರಾ ಆರ್ಟ್ ಕೌನ್ಸಿಲ್ ಇದರ ಸಮಾರಂಭಗಳಲ್ಲಿ ತಾಳಮದ್ದಲೆ ಕಾರ್ಯಕ್ರಮ ನೀಡಿದ ಸಂದರ್ಭದಲ್ಲಿ ಯಕ್ಷಗಾನ ಪ್ರೇಮಿ ಹಾಗೂ ಸಂಘಟಕರಾದ ಡಾ| ಬಿ.ಬಿ.ಶೆಟ್ಟರು ಪ್ರಶಂಸಿಸಿ ಶುಭ ಹಾರೈಸಿದ್ದರು. ಅಂತೆಯೇ ಉಡುಪಿಯ ವರದೇಂದ್ರ ಕಲಾಮಂದಿರದಲ್ಲಿ ಸಂಘದ ಆರ್ಥಿಕತೆಗಾಗಿ ಪ್ರದರ್ಶಿಸಿದ "ಶ್ರೀ ಶನೀಶ್ವರ ಮಹಾತ್ಮೆ" ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಯಿತು. ಕಟಪಾಡಿಯ ಗಣ್ಯ ವ್ಯಕ್ತಿಯಾಗಿದ್ದ ಶ್ರೀ ಕೆ. ಮುದ್ದು ಸುವರ್ಣರು ನಿರ್ಮಿಸಿದ "ಚೋಮನ ದುಡಿ" ಚಲನ ಚಿತ್ರಕ್ಕೆ ಸ್ವರ್ಣ ಕಮಲ ಪ್ರಶಸ್ತಿ ಬಂದಾಗ ಇಲ್ಲಿನ ಖ್ಯಾತ ವೈದ್ಯರಾಗಿದ್ದ ಡಾ. ಕೆ. ಆರ್. ಕೊರಡ್ಕಲ್ ಮತ್ತಿತರ ಸಂಘಟಕರ ನೇತೃತ್ವದಲ್ಲಿ ನಡೆದ ಬೃಹತ್ ಸಾರ್ವಜನಿಕ ಅಭಿನಂದನಾ ಸಮಾರಂಭದ ಕೊನೆಯಲ್ಲಿ ಸಂಘದ "ಶಶಿಪ್ರಭಾ ಪರಿಣಯ" ಯಕ್ಷಗಾನ ಪ್ರಸಂಗ ವೀಕ್ಷಿಸಿದ ಡಾ. ಕೆ. ಶಿವರಾಮ ಕಾರಂತರು ಶ್ಲಾಘಿಸಿದ್ದರು.

ದ.ಕ. ಜಿಲ್ಲೆಯ ಪುತ್ತೂರಿನವರಾದ ಕುರಯ ರಾಮಕೃಷ್ಣ ಶಾಸ್ತ್ರೀ ಮತ್ತು ಶ್ರೀಮತಿ ಪರಮೇಶ್ವರೀ ದಂಪತಿಗಳ ಪ್ರಥಮ ಪುತ್ರರಾದ ಡಾ. ಕೆ. ನಾರಾಯಣ ಶಾಸ್ತ್ರಿಗಳು ಮದ್ರಾಸಿನ ಮೈಲಾಪುರದ ವೆಂಕಟರಮಣ ಆಯುರ್ವೇದ ಕಾಲೇಜಿನಲ್ಲಿ ಶಿರೋಮಣಿ ಪದವಿ ಪಡೆದು, ಕಟಪಾಡಿಯ ಶ್ರೀ ಭುವನೇಂದ್ರ ಆಯುರ್ವೇದಿಕ್ ಫಾರ್ಮಸಿ ಇಲ್ಲಿ ವೈದ್ಯರಾಗಿ ಸೇರಿ, ತದನಂತರದಲ್ಲಿ ತನ್ನ ಪುತ್ರಿ ಮಂಜುಳಾಳ ಹೆಸರಿನೊಂದಿಗೆ ಸ್ವಂತ ಡಿಸ್ಪೆನ್ಸರಿಯನ್ನು ತೆರೆದು ಬಿಡುವಿನ ಸಮಯದಲ್ಲಿ ಬಹಳಷ್ಟು ಪ್ರಸಂಗದ ಪುಸ್ತಕಗಳನ್ನು ಮತ್ತು ವಿವಿಧ ಸಾಹಿತ್ಯ ಪುಸ್ತಕಗಳನ್ನು ಅಧ್ಯಯನ ಮಾಡುವುದರೊಂದಿಗೆ ಯಕ್ಷಗಾನಕಲೆಯಲ್ಲಿ ತೊಡಗಿಸಿಕೊಂಡು, ನಿಸ್ವಾರ್ಥವಾಗಿ ಹಿರಿಯ ಕಲಾವಿದರನ್ನು ಗೌರವಿಸುತ್ತಾ, ಕಿರಿಯರನ್ನು ಪ್ರೋತ್ಸಾಹಿಸಿ ಬೆಳೆಸಿದರು. ಬಹಳ ಮೃದು ಸ್ವಭಾವದ ಇವರು ಪತ್ನಿ ಶ್ರೀಮತಿ ಕೆ. ವಿಮಲಾ ಶಾಸ್ತ್ರೀ ಹಾಗೂ ಐದು ಗಂಡು ಮತ್ತು ಇಬ್ಬರು ಹೆಣ್ಣುಮಕ್ಕಳೊಂದಿಗೆ ತನಗಾಗಿ ಏನನ್ನೂ ಮಾಡದೆ ಇದ್ದುದರಲ್ಲಿಯೇ ಸಂತೃಪ್ತಿಯಿಂದ ಬಹಳ ಸರಳವಾಗಿ ಬದುಕಿ, ಯಾರಲ್ಲಿಯೂ ಸಂಘಕ್ಕಾಗಿ ದೇಣಿಗೆಯನ್ನು ಯಾಚಿಸದೆ, ಯಕ್ಷಮಾತೆಯ ಸೇವೆಯೊಂದಿಗೆ ಹದಿನೈದು ವರುಷಗಳ ಕಾಲ ಸಂಘವನ್ನು ಮುನ್ನಡೆಸಿ ತನ್ನ ಅರುವತ್ತೆರಡನೆಯ ವಯಸ್ಸಿನಲ್ಲಿ(1986) ನಿಧನರಾದರು. ಕಾರಣಾಂತರಗಳಿಂದ ಈ ಸಂಘ ಇಂದು ನೇಪಥ್ಯಕ್ಕೆ ಸರಿದಿರುವುದು ಬೇಸರದ ವಿಚಾರ.



### ಸಿ. ವಿಘ್ನೇಶ್ ಕುಮಾರ್


ಉಡುಪಿ ಶ್ರೀ ಸಿ. ದಿವಾಕರ ರಾವ್ ಮತ್ತು ವಿಜಯಲಕ್ಷ್ಮೀ ದಂಪತಿಗಳ ಪುತ್ರ ಸರಕಾರಿ ಪ್ರೌಢಶಾಲೆ ವಳಕಾಡು ಇದರ ವಿದ್ಯಾರ್ಥಿ ಸಿ. ವಿಘ್ನೇಶ್ ಕುಮಾರ್ 2020–2021ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 573 (ಶೇ.92) ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾನೆ.



### ಜಂಟಿ ಕಾರ್ಯದರ್ಶಿ ಹುದ್ದೆಗೆ ಬಡ್ತಿ

ಯು.ಜಿ. ಸುರೇಶ್ ರಾವ್ ಅವರ ಪತ್ನಿಯಾಗಿರುವ ವತ್ಸಲಾ ಕುಮಾರಿ ಅವರು ಕರ್ನಾಟಕ ಸರ್ಕಾರದ ಜಂಟಿ ಕಾರ್ಯದರ್ಶಿ (ಹಣಕಾಸು) ಹುದ್ದೆಗೆ ಬಡ್ತಿ ಪಡೆದಿದ್ದಾರೆ.

## ಪ್ರಖ್ಯಾತ ಮಕ್ಕಳ ವೈದ್ಯ ಡಾ| ರವಿರಾಜ್ ನಿಧನ



ಉಡುಪಿಯ ಒಳಕಾಡು ರಂಗರಾವ್‌ರವರ ತೃತೀಯ ಪುತ್ರ ನಮ್ಮ ಸಮಾಜದ ಪ್ರಖ್ಯಾತ ಮಕ್ಕಳ ವೈದ್ಯರಾಗಿದ್ದ ಬೈಂದೂರು ನಿವಾಸಿಯಾದ ಡಾ| ರವಿರಾಜ್‌ರವರು (67 ವ) ತಾ. 07.09.2021ರಂದು ನಿಧನ ಹೊಂದಿದರು. ಇವರು ಬೈಂದೂರು ಮತ್ತು ಭಟ್ಕಳದಲ್ಲಿ ಜನಪ್ರಿಯ ಮಕ್ಕಳ ವೈದ್ಯರಾಗಿದ್ದವರು. ಇವರು ಪತ್ನಿ ಶ್ರೀಮತಿ ಸುಜಾತರನ್ನು ಅಗಲಿದ್ದಾರೆ. ಕುಂಜಿಬೆಟ್ಟು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘಕ್ಕೆ ದೇಣಿಗೆ ನೀಡಿ ಸಂಘಕ್ಕೆ ಸರ್ವ ರೀತಿಯಲ್ಲಿ ಸಹಕಾರ ನೀಡಿದ್ದರು. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಶ್ರೀ ಶಾರದೆಯಲ್ಲಿ ಪ್ರಾರ್ಥಸುತ್ತೇವೆ.


ಶುಭಾಶಯಗಳೊಂದಿಗೆ

**ಡಾ| ವಿಜಯಾ ರಾವ್ ವೈ.ಬಿ**

ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)


ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು



ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ

ಫೋನ್ : 9448164327

With Best Compliments From :



## ಶೃಂಗೇರಿ ಭೇಟಿ





ತಾರೀಕು 05.09.2021 ರಂದು ವಾಡಿಕೆಯಂತೆ ಚೌತಿಯ ಮುಂಚಿನ ಆದಿತ್ಯವಾರ ಉಡುಪಿ ಸಂಘದ ವತಿಯಿಂದ ಶೃಂಗೇರಿ ಜಗದ್ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯಲು ತೆರಳಲಾಯಿತು. ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ನೇತೃತ್ವದಲ್ಲಿ ಗುರುಗಳಿಗೆ ಪಾದಪೂಜೆ ಭಿಕ್ಷಾವಂದನೆಗಳನ್ನು ಸಲ್ಲಿಸಿ ಆಶೀರ್ಮಂತ್ರಾಕ್ಷತೆ ಪಡೆದು ಹಿಂತಿರುಗಿದರು.



## ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ಋಗುಪಾಕರ್ಮ



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ ಋಗುಪಾಕರ್ಮ ತಾ.21.08.2021 ರಂದು ಸದನದಲ್ಲಿ ನಡೆಯಿತು. ವೇ.ಮೂ.ಪಾವಂಜೆ ಜಗದೀಶ್ ಉಪಾಧ್ಯಾಯರು ಉಪಾಕರ್ಮ, ಹೋಮ ಹಾಗೂ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಿದರು. ಶ್ರೀಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಪದಾಧಿಕಾರಿಗಳು, ನಿರ್ದೇಶಕರುಗಳು, ಸದಸ್ಯರುಗಳು ಸೇರಿದಂತೆ ಸುಮಾರು 60 ಸಮಾಜ ಬಾಂಧವರು ಸಾಮಾಜಿಕ ಅಂತರ ಕಾಯ್ದುಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಡಾ| ನಂದಕಿಶೋರ್ ಕಾರ್ಯಕ್ರಮದ ಖರ್ಚು–ವೆಚ್ಚಗಳನ್ನು ಪ್ರಾಯೋಜಿಸಿ ಸಹಕರಿಸಿದರು. ಕೋಶಾಧಿಕಾರಿ ಶ್ರೀ.ಪಿ.ಶ್ರೀಕಾಂತ್ ರಾವ್ ಧನ್ಯವಾದ ನೀಡಿದರು.

## ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ : ವಿದ್ಯಾರ್ಥಿವೇತನ ವಿತರಣೆ



ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನ(ರಿ.) ಪ್ರಸಾದ ಭವನ ವತಿಯಿಂದ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮವು ಕಾರ್ಕಳ ತೆಳ್ಳಾರು ರಸ್ತೆಯಲ್ಲಿರುವ "ಕಸ್ತೂರಿ ಸಭಾಂಗಣದಲ್ಲಿ " ದಿನಾಂಕ 08.08.2021 ರಂದು ಆದಿತ್ಯವಾರ ಅಪರಾಹ್ನ 2 ಗಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರಾದ ಮಾನ್ಯ ಕೇಶವ ರಾವ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭದಲ್ಲಿ 2020–21ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ.ಯಲ್ಲಿ ತೇರ್ಗಡೆಯಾದ ಕು.ಕೀರ್ತನ ಹೆಬ್ಬಾರ್, ಕು.ರಕ್ಷಿತಾ, ಕು.ಶಾರ್ವರಿ, ಅರವಿಂದ ರಾವ್, ಕು.ಪ್ರಜ್ಞಾ, ಕೆ.ಸುದೀಪ್ ಹೆಬ್ಬಾರ್, ಕು.ಅದಿತಿ, ಆದರ್ಶ್ ರಾವ್ ಹಾಗೂ ಕು.ಶ್ರೇಯ ಹೆಬ್ಬಾರ್ ಮತ್ತು 10ನೇ ತರಗತಿಯಲ್ಲಿ ಉತ್ತೀರ್ಣರಾದ ಆಕಾಶ್, ಕು.ಅದಿತಿ, ಸುಜೇಶ್, ಕು.ರಚನಾ ಎಮ್ ಹಾಗೂ ಕು.ಸಿಂಚನ ಶರ್ಮಾ ಇವರೆಲ್ಲರಿಗೂ ಪ್ರತಿಷ್ಠಾನದ ವತಿಯಿಂದ ಹಾಗೂ ದಾನಿಗಳಾದ ಶ್ರೀಮತಿ ಅನುರಾದ ಶರ್ಮ, ಇವರ ವತಿಯಿಂದ ವಿದ್ಯಾರ್ಥಿವೇತನ ಹಾಗೂ ಪ್ರತಿಷ್ಠಾನದ ವತಿಯಿಂದ ಪೆನ್ನು ಮತ್ತು ದಾನಿಗಳಾದ ಶ್ರಿಮತಿ ಸಾವಿತ್ರಿ ಮನೋಹರ ರಾವ್ ಇವರಿಂದ ನೋಟ್ ಪುಸ್ತಕವನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಘದ ಅಧ್ಯಕ್ಷರು ಹಾಗು ಹಿರಿಯರಾದ ಕೃತಿವಾಸ ಶರ್ಮ, ರತ್ನಾಕರ ರಾವ್, ಮುರಲೀಧರ ಶರ್ಮ. ಹರಿಶ್ಚಂದ್ರ ರಾವ್ ಕೆ., ರಮೇಶ್ ರಾವ್ ಸಿ., ಸತೀಶ್ ಭಟ್, ಸಿ.ಎ.ರಮೇಶ್ ರಾವ್ ಕೆ, ವಿಜಯಕುಮಾರ್ ಪರಪ್ಪು, ಭವಾನಿ ಶಂಕರ ರಾವ್, ಶ್ರೀಮತಿ ಶೈಲಜ ರಾವ್, ಶ್ರೀಮತಿ ಪ್ರಭಾವತಿ ಐ.ಕೆ, ಇವರಿಂದ ದೀಪ ಪ್ರಜ್ವಲನೆ ಮಾಡುವ ಮುಖೇನ ನೆರವೇರಿತು. ಇದೇ ಸಂದರ್ಭದಲ್ಲಿ ದಾನಿಗಳಾದ ಕುಕ್ಕುಂದೂರಿನ ಶ್ರಿಮತಿ ರಾಜೇಶ್ವರಿ ಶರ್ಮ ಇವರನ್ನು ಸನ್ಮಾನಿಸಲಾಯಿತು. ಹಿಂದಿನ ವರ್ಷದ ವರದಿಯನ್ನು ಕಾರ್ಯದರ್ಶಿ ಹರಿಶ್ಚಂದ್ರ ರಾವ್ ವಾಚಿಸಿದರು ಹಾಗು ಖಜಾಂಚಿ ಕೋದಂಡರಾವ್‌ರವರು ಲೆಕ್ಕಪತ್ರ ಮಂಡಿಸಿದರು. ಶ್ರಿಮತಿ ಮಲ್ಲಿಕಾ ಹೆಬ್ಬಾರ್ ಸ್ವಾಗತಿಸಿ, ಶ್ರೀಮತಿ ಸೌಮ್ಯ ರಾವ್ ಧನ್ಯವಾದ ನೀಡಿ, ಶ್ರಿಮತಿ ಶ್ರೀಲತಾ ಶರ್ಮಾರವರು ಕಾರ್ಯಕ್ರಮ ನಿರ್ವಹಿಸಿದರು.



**ಕರಂದಾಡಿ ಶ್ಯಾನುಭೋಗರ ಮನೆಯಲ್ಲಿ ಆರಾಧನೆಗೊಂಡ ಗಣಪತಿ**


*With Best Compliments from :*




**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

PRODUCTS ARE AVAILABLE AT ATTRACTIVE DISCOUNT PRICES





**BATTERY PLANET**
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

ವೃಂದಾವನ್ ನೆಸ್ಟ್
ಶುದ್ಧ ಸಸ್ಯಾಹಾರಿ
ಎನ್.ಎಚ್. 66. ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್:7899990950



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ
ಆದರದ ಸ್ವಾಗತ ಬಯಸುವ
ಹೋಟೆಲ್ ವೃಂದಾವನ ಕದ್ರಿ, ಮಂಗಳೂರು
ವಿನೀತ್ ಮೆಡಿಕಲ್ಸ್ ಪಡುಬಿದ್ರಿ
ವಿಶ್ವ ಟ್ರಾನ್ಸ್‌ಪೋರ್ಟ್ ಮಂಗಳೂರು
ಶ್ರೀಮತಿ ಮಧುರಾ ವ್ಯಾಸರಾಜ್ ರಾವ್ ಶ್ರೀ ಧವಳ ಎಲ್ಲೂರು
ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ





Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org